Online Newspaper Clipping Service

THE TIMES OF INDIA

**Dtd- Sunday, 08th, October– 2017** **Pg.No.19**

# UGC proposes homogenous syllabus for psychology

Mohammad.Ibrar
@timesgroup.com

**New Delhi:** The University Grants Commission (UGC) has recommended a homogenous syllabi for psychology courses at undergraduate, post-graduate and PhD levels across universities, while claiming that the present content is not "rooted in the national ethos."

According to notification, an expert committee has drafted a new syllabi for the BA/BSc, MA/MSc and PhD of the psychology courses, taking into consideration the "developments in the field of psychology, with special relevance to the Indian context." The committee looked into several aspects like teaching and research in the subject to come up with a model syllabi.

The notification, however, has been criticised by several Delhi University (DU) teachers, who said it was an example of UGC overreach. The teachers argued that a homogeneous syllabi will not work as there is vast differences in the infrastructure and teacher quality across India.

*Full report on www.toi.in*

# ವಿವಿಗಳಲ್ಲಿ ವಿಪತ್ತು ಜಾಗೃತಿ ಕೋರ್ಸ್

**ಬೆಂಗಳೂರು:** ತುರ್ತು ಸಂದರ್ಭದಲ್ಲಿ ಸಂಭವಿಸುವ ಅವಘಡಗಳ ನಿವಾರಣೆ ಹಾಗೂ ವಿಪತ್ತಿನ ಬಗ್ಗೆ ಜಾಗೃತಿ ಮೂಡಿಸಲು ದೇಶದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಕಡ್ಡಾಯವಾಗಿ ಕೋರ್ಸುಗಳನ್ನು ಆರಂಭಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

- ಕಡ್ಡಾಯಕ್ಕೆ ಕೇಂದ್ರ ಸರ್ಕಾರ ಚಿಂತನೆ
- ಯುಜಿಸಿಯಿಂದ ವಿವಿಗಳಿಗೆ ಸುತ್ತೋಲೆ
- ದೇಶದಲ್ಲಿ ಹೆಚ್ಚುತ್ತಿರುವ ಅವಘಡಗಳು

ದೇಶದ ಎಲ್ಲ ಭಾಗಗಳಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಪ್ರಕೃತಿ ವಿಕೋಪಗಳ ಅವಘಡಗಳನ್ನು ತಪ್ಪಿಸುವ ನಿಟ್ಟಿನಲ್ಲಿ ಮಾಹಿತಿ ಮತ್ತು ತರಬೇತಿ ನೀಡುವುದಕ್ಕಾಗಿ ವಿಶ್ವವಿದ್ಯಾಲಯಗಳಲ್ಲಿ ಈ ಕೋರ್ಸ್‌ಗಳು ಕಡ್ಡಾಯವಾಗಿ ಆರಂಭಿಸಬೇಕೆಂಬ ಕೇಂದ್ರದ ಮಾನವ ಸಂಪನ್ಮೂಲ ಇಲಾಖೆ ಯುಜಿಸಿ ಮೂಲಕ ಎಲ್ಲ ವಿವಿಗಳಲ್ಲಿ 2015ರಲ್ಲಿ ಮಾರ್ಗಸೂಚಿ ಸಿದ್ಧಪಡಿಸಲು ಸೂಚನೆ ನೀಡಿತ್ತು. ಈಗ ಆ ಮಾರ್ಗಸೂಚಿಯನ್ವಯ ಕೋರ್ಸ್‌ಗಳನ್ನು ಆರಂಭಿಸುವಂತೆ ಎಲ್ಲ ವಿಶ್ವವಿದ್ಯಾಲಯಗಳಿಗೆ ಸೂಚನೆ ನೀಡಲಾಗಿದೆ.

ಮಾರ್ಗಸೂಚಿ ಪಟ್ಟಿಯಲ್ಲಿ ಏಳು ಅಂಶಗಳನ್ನು ಸಿದ್ಧಪಡಿಸಲಾಗಿದ್ದು ಅದರಲ್ಲಿ ಕೆಲವು ಉಪಪಂಗಡಗಳನ್ನೂ ಮಾಡಿದೆ. ಭೂಕಂಪ, ಬಾಂಬ್‌ದಾಳಿ, ಪ್ರಾಕೃತಿಕ ವಿಕೋಪ, ವಿಷಾನಿಲ ದಾಳಿ, ಉಗ್ರಗಾಮಿಗಳು ದಾಳಿ ನಡೆಸಿದ ಸಂದರ್ಭದಲ್ಲಿ ಯಾವ ರೀತಿ ಪ್ರತಿಕ್ರಿಯಿಸಬೇಕು, ವಾತಾವರಣವನ್ನು ನಿಭಾಯಿ ಸುವ ಪರಿ ಹೀಗೆ ಅನೇಕ ವಿಷಯ ಗಳ ಪಠ್ಯವನ್ನು ವಿಶ್ವವಿದ್ಯಾಲಯಗಳು ಸಿದ್ಧಪಡಿಸಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಕೇವಲ ಇದಷ್ಟೇ ಅಲ್ಲದೇ ಆರ್ಥಿಕತೆಯ ಧಕ್ಕೆ ಬಂದಾಗ ಹೇಗೆ ಎದುರಿಸಬೇಕು ಎನ್ನುವುದನ್ನೂ ಸಹ ಯುಜಿಸಿ ಚಿಂತನೆ ನಡೆಸಿದೆ. ವಿಪತ್ತು ನಿರ್ವಹಣೆ ಹಾಗೂ ತುರ್ತು ಪರಿಸ್ಥಿತಿ ಸಮಯದಲ್ಲಿ ಸಾರ್ವಜನಿಕರು ಯಾವ ರೀತಿ ಪ್ರತಿಕ್ರಿಯಿಸಬೇಕು. ಇನ್ನು ಅಗ್ನಿ ಅವಘಡ, ಉಗ್ರರ ದಾಳಿ ಸೇರಿದಂತೆ ಕೌಟುಂಬಿಕ ತೊಂದರೆಗಳನ್ನು ಎದುರಿಸುವ ಬಗ್ಗೆಯೂ ಕೋರ್ಸ್‌ನ ಪಠ್ಯದಲ್ಲಿ ಮಾಹಿತಿನ ನೀಡಬೇಕೆಂದು ಯುಜಿಸಿ ಕಾರ್ಯದರ್ಶಿ ಪಿ.ಕೆ ಠಾಕೂರ್ ಹೊರಡಿಸಿರುವ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

## ಪ್ರಾಧ್ಯಾಕರ ಅಧ್ಯಯನ ಅಗತ್ಯ

ಯುಜಿಸಿ ಇದೀಗ ಆದೇಶ ಹೊರಡಿಸಿದೆ. ಆದರೆ ವಿಶ್ವವಿದ್ಯಾಲಯಗಳು ಪಠ್ಯವನ್ನು ಯಾವ ರೀತಿ ಸಿದ್ಧಪಡಿಸಬೇಕೆಂದು ಅಧ್ಯಯನ ನಡೆಸಬೇಕು. ತಜ್ಞರ ಸಲಹೆ ಸೂಚನೆಗಳನ್ನು ಪಡೆಯಬೇಕು. ಇದೇ ಕೋರ್ಸ್‌ಗಳ ಪಾಠ ಮಾಡುವ ಪ್ರಾಧ್ಯಾಪಕರ ಅಧ್ಯಯನ ಹೇಗೆ ಎನ್ನುವುದರ ಬಗ್ಗೆಯೂ ಯುಜಿಸಿ ಮಾಹಿತಿ ನೀಡಬೇಕು.